ಇ) ಬಿಡುಗಡೆಯಾದ ಆಹಾರ ಧಾನ್ಯದಲ್ಲಿ ವಿಚಾರಿಗಿರುವ ಮತ್ತು ಉಳಿದಿರುವ ಹಾಗೂ ಆ ಪೈಕಿ ಉಪಯೋಗಿಸಿದ ಆಹಾರ ಧಾನ್ಯದ ವಿವರಗಳನ್ನು ತಃಖ್ತೆ 2ರಲ್ಲಿ ಲಗತ್ತಿಸಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಗಳ ಆಪರೇಟರ್‌ಗಳ ನೇಮಕಾತಿ

2352-ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕೆರು ನೀರು ಸರಬರಾಜು ಯೋಜನೆಯ ಅಡಿಯಲ್ಲಾಗಲಿ, ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಾಗಲಿ, ಆಪರೇಟರುಗಳ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾ ಪರಿಷತ್‌ಗಳಿಗಾಗಲಿ, ಮಂಡಲ ಪಂಚಾಯಿತಿಗಳಿಗಾಗಲಿ, ಅಧಿಕಾರವಿಲ್ಲದಕ್ಕಾಗಿ ನೀರು ಸರಬರಾಜು ಆಗದೇ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಚುಕ್ಕೆ ಗುರುತಿನ ಪ್ರಶ್ನೆ 288ಕ್ಕೆ ದಿನಾಂಕ: 17.12.90 ರಂದು ಕೆಲವೊಂದು ಮಂಡಲ್ ಪಂಚಾಯ್ತಿಗಳಲ್ಲಿ ತೊಂದರೆಯಾಗಿದ್ದು ತಿಳಿದು ಬಂದಿರುತ್ತದೆಂದು ತಿಳಿಸಲಾಗಿದೆ. ಈ ತೊಂದರೆ ಇಡೀ ರಾಜ್ಯಕ್ಕೆ ಅನ್ವಯವಾಗುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಕೆಲವೊಂದು ಮಂಡಲ್ ಪಂಚಾಯ್ತಿಗಳಲ್ಲಿ ತೊಂದರೆ ಇದೆಯೆಂದು ಉತ್ತರ ನೀಡಿರುವುದು ಕೆಲವು ಜಿಲ್ಲೆಗಳಲ್ಲಿ ಆಪರೇಟರ್‌ಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗಿದೆ ಎಂಬ ಅರ್ಥವಲ್ಲವೇ?

ಇ) ಒಂದು ವೇಳೆ ಆ ಪ್ರಕಾರ ಅನುಮತಿ ನೀಡಿದ್ದರೆ ಆ ಜಿಲ್ಲೆಗಳು ಯಾವುವು?

ಈ) ನನ್ನ ಪ್ರಶ್ನೆಗೆ ಯೋಜನೆಗಳ ಚಾಲ್ತಿಗಾಗಿ ತೊಂದರೆಯಾಗದಂತೆ ಆಪರೇಟರ್‌ಗಳನ್ನು ನೇಮಕ ಮಾಡಲು ಸರ್ಕಾರ ಯೋಜಿಸುತ್ತಿದೆ ಎಂದು ತಿಳಿಸಿ ಸುಮಾರು ಒಂದು ವರ್ಷವಾದರೂ ಸಹ ಇವುಗಳ ಬಗ್ಗೆ ಯಾವ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣವೇನು?

ಉ) ಇದಕ್ಕಾಗಿ ಸರ್ಕಾರ ಮುಂದಿನ ವ್ಯವಸ್ಥೆ ಯಾವಾಗ ಮಾಡುವುದು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಇಡೀ ರಾಜ್ಯದಲ್ಲಿ ಆಪರೇಟರ್‌ಗಳ ಕೊರತೆಯಿಂದಾಗಿ ಕುಡಿಯುವ ನೀರು ಸರಬರಾಜಿನ ಮೂಲಕ ನೀರನ್ನು ಒದಗಿಸಲು ಸಾಧ್ಯವಾಗದೇ ಇರುವ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಅಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉ)

ನೀರು ಸರಬರಾಜು ಯೋಜನೆಯನ್ನು ನಡೆಸಲು ಮಂಡಲ ಪಂಚಾಯತಿಗಳೇ ಸ್ಥಳೀಯವಾಗಿ ವ್ಯವಸ್ಥೆ ಮಾಡಿಕೊಂಡಿರುತ್ತವೆ.

ಸೇಡಂ ಕ್ಷೇತ್ರದ ಮಳಖೇಡ ರಿಬ್ಬನ್‌ಪಲ್ಲಿ ಹಾಗೂ ಸೇಡಂ ಕೂಡ್ಲಾ ರಸ್ತೆಗಳ ಕುರಿತು